ದೃಷ್ಟಿಯಲ್ಲಿ ಅದು ಹೇಗೆ ವಜ್ರದ ನೆಲವಾಯ್ತು? ''ಅದೇನು ನೇರವಾಗಿ ವಿಷಯಕ್ಕೆ ಬಾರಪ್ಪ'' ಎಂದೆ. ಅವನ ಬಳಸು ದಾರಿ ನನ್ನ ಯೋಚನೆಗಳ ದಿಕ್ಕು ತಪ್ಪಿಸಿತ್ತು.

''ಸಾರ್, ನಿಮ್ಮ ಊರು ಸುತ್ತಮುತ್ತ, ನೀಲಿಗಿರಿ ತೋಪುಗಳಲ್ಲಿ, ಬೀಡು ಬಿಟ್ಟಿರೋ ಜಮೀನುಗಳಲ್ಲಿ ಮಣ್ಣಲ್ಲಿ ಇರುತ್ತೆ ಸಾರ್, 'ಡಬಲ್ ಎಂಜಿನ್' ಹಾವು. ಡಬಲ್ ಎಂಜಿನ್ ಅಂದ್ರೆ, ಎರಡು ತಲೆ ಹಾವು ಅಂತ. ಅದನ್ನ ಒಂದು ಕಡೆ ತಡೆದ್ರೆ... ವಿರುದ್ಧ ದಿಕ್ಕಲ್ಲಿ ಚಲಿಸುತ್ತೆ. ನಿಷ್ಪಾಪಿ ಜೀವಿ. ನೋಡೋಕೆ ಭಯ ಹುಟ್ಟಿಸೋ ಹಾಗಿದ್ರೂ ಅದರಿಂದ ಯಾವುದೇ ಹಾನಿ ಇಲ್ಲ. ಎರೇ ಹುಳದ ಥರ ಉಪಕಾರ ಮಾಡುತ್ತೆ ಹೊರತು ಹಾನಿ ಮಾಡೋದಿಲ್ಲ. ಅಂಥ ಒಂದು ಹಾವನ್ನ ನೀವು ಹಿಡಿದು ತಂದಿದ್ದೇ ಆದ್ರೆ... ಐದು ಕೋಟಿಗೆ ಪಾರ್ಟಿ ಇದಾನೆ'' ಎಂದು ಅಸಲು ವಿಷಯ ಒಪ್ಪಿಸಿದ. ಅದನ್ನು ಕೇಳುತ್ತಿದ್ದಂತೆ ನನ್ನ ತಲೆ ದಿಮ್ಮೆಂದಿತು. ಇವನು ಹೊಸ ಸಿನಿಮಾದ ಕತೆ ಹೇಳುತ್ತಿದ್ದಾನೋ, ನಿಜವನ್ನೋ?

ಇಂತಹದ್ದೇ ಕತೆಯಿದ್ದ ತಮಿಳು ಸಿನಿಮಾ ಒಂದನ್ನು ನೋಡಿದ್ದೆ. ಆಗಲೂ ಇದೇ ಗೊಂದಲ. ಈಗ ನೋಡಿದರೆ ಶೇಷಾಚಲಂ ಹಾವನ್ನು ಕೊಳ್ಳಲು ಪಾರ್ಟಿ ಇದಾನೆ, ಅದೂ ಸಹ ನಮ್ಮ ಊರು ಸುತ್ತಮುತ್ತ ಆ ಹಾವುಗಳು ಹೇರಳವಾಗಿವೆ ಎಂದು ಹೇಳುತ್ತಿದ್ದಾನೆ. ನಾನಂತೂ ಒಂದು ದಿನವೂ ಅಂತಹ ಹಾವನ್ನು ಈ ಹಿಂದೆ ಕಂಡಿರಲಿಲ್ಲ.

''ಅಲ್ಲ, ಶೇಷು... ಇದೆಲ್ಲ ನಿಜಾನ? ಅಂಥ ನಿಷ್ಪಾಪಿ ಹಾವಿಗೆ ಐದು ಕೋಟಿ ಕೊಟ್ಟು ಅದನ್ನು ಅವ್ರೇನು ಮಾಡ್ಕೊತಾರೆ? ಅದರಿಂದ ಏನು ಉಪಯೋಗ?''

''ಸಾರ್, ಅದನ್ನ ಫಾರಿನ್ನಿಗೆ ಎಕ್ಸ್‌ಪೋರ್ಟ್ ಮಾಡ್ತಾರಂತೆ'' ಎಂದ, ತಾನೇ ಎಕ್ಸ್‌ಪೋರ್ಟ್ ಮಾಡುವವನಂತೆ. ನನಗೆ ಮತ್ತದೇ ಬಗೆಹರಿಯದ ಗೊಂದಲದಿಂದ, ''ಅಲ್ಲಪ್ಪ, ಫಾರಿನ್ನವ್ರು ಅದನ್ನ ತಗೊಂಡು ಏನ್ ಮಾಡ್ತಾರೆ?'' ಎಂದೆ. ನನ್ನ ಅಮಾಯಕ ಪ್ರಶ್ನೆಗಳಿಂದ ಅವನಲ್ಲೂ ಅಸಹನೆ ಶುರುವಾಗಿರಬೇಕು!

''ಸಾರ್, ಅವ್ರು ತಗೊಂಡು ಕಬಾಬ್ ಮಾಡ್ಕೊಂಡು ತಿನ್ಕೊಳ್ಳಿ, ನಮಗೆ ಆಗಬೇಕಾದ್ದೇನು? ಐದು ಕೋಟಿ ಬರುತ್ತೆ ಅಂತ ಹೇಳ್ತಿದೀನಲ್ಲ... ಹಾವು ಹುಡುಕಿ... ಹಾವು ಸಿಕ್ಕಿದ ತಕ್ಷಣ, ಸಿನಿಮಾ ಪ್ಲಾನಿಂಗ್ ಮಾಡೋಣ'' ಎಂದು ನನ್ನ ಗೊಂದಲಗಳಿಗೆ ಫುಲ್‌ಸ್ಟಾಪಿಟ್ಟ. ನನಗೆ ಗೊತ್ತಿರುವ ಹಾಗೆ ಶೇಷಾಚಲಂ ಬುದ್ಧಿನೆಟ್ಟಗಿರುವ ಚಾಣಾಕ್ಷ ಅಕೌಂಟೆಂಟ್. ಅವನಿಗೆ ತಲೆಕೆಟ್ಟಿದೆ ಎಂದು ಒಪ್ಪಿಕೊಳ್ಳಲು ನನ್ನ ಮನಸ್ಸು ತಯಾರಿರಲಿಲ್ಲ. ಹಾಗಿದ್ದರೆ ಇಂತಹದೊಂದು ದಂಧೆ ಇರುವುದು ನಿಜವೇ? ಇಲ್ಲದಿದ್ದಲ್ಲಿ ಶೇಷಾಚಲಂ ಇಷ್ಟು ಖಚಿತವಾಗಿ ಹೇಳಲು ಹೇಗೆ ಸಾಧ್ಯ? ಅವನು ಹೇಳುವುದು ನಿಜವೇ ಆಗಿದ್ದರೆ, ನನ್ನ ಕಷ್ಟಗಳೆಲ್ಲ ದೂರವಾಗಿ, ನಾನೇ ನಿರ್ಮಾಪಕನಾಗಿ, ನಿರ್ದೇಶಕನಾಗಿ ಹತ್ತು ಜನಕ್ಕೆ ಕೆಲಸ ಕೊಡುವ ಅದೃಷ್ಟ ಹಾವಿನಿಂದಾಗಿ ಕೈಗೂಡುವುದಿದ್ದರೆ ನಾನ್ಯಾಕೆ ಬೇಡ ಎನ್ನಲಿ? ಎಷ್ಟಾದರೂ ನಾನೂ ಮನುಷ್ಯನೇ ಅಲ್ಲವೇ... ಎಂದು ಒಂದು ನಿರ್ಧಾರಕ್ಕೆ ಬಂದೆ.

''ಆಯ್ತುಪ್ಪ, ನಾಳೆಯಿಂದಾನೇ ಎಲ್ಲ ಕೆಲಸ ಬಿಟ್ಟು ಹಾವು ಹುಡುಕೋದಕ್ಕೆ ಹೋಗ್ತೀನಿ, ಮಕ್ಕಳನ್ನ ಸ್ಕೂಲಿಗೆ ಕಳಿಸಿ, ಅಡಿಗೆ ಕೆಲಸ ಮುಗಿದ ಮೇಲೆ ನನ್ನ ಹೆಂಡ್ತೀನೂ ಬಿಡುವಾಗಿರ್ತಾಳೆ... ಅವಳನ್ನೂ ಜೊತೆಗೆ ಕರ್ಕೊಂಡೋಗ್ತೀನಿ. ಯಾಕೆ ಅಂದ್ರೆ ಮನೇಲಿ ಜರೀಗಳನ್ನ, ಜಿರಲೆಗಳನ್ನ ನಿರ್ಭಯವಾಗಿ ಬಟ್ಟೇಲಿ ಸುತ್ತಿಕೊಂಡು ಎತ್ತಿ ಹೊರಗೆ ಬಿಸಾಡೋದು ಅವಳಿಗೆ ಅಂಗೈಯಲ್ಲಿ ನೆಲ್ಲಿಕಾಯಿಯಷ್ಟೇ ಸುಲಭವಾಗಿ ಸಿದ್ಧಿಸಿದ ಕಲೆ. ನನ್ನ ಸಹಾಯಕ್ಕೆ ಬರ್ತಾಳೆ'' ಎಂದೆ. ಒಮ್ಮೆಲೆ